**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1073/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಚಂದ್ರಶೇಖರ್ ಎ.ಎಂ | ಪ್ರಾಸಾ-3 |
| ತಂದೆಯ ಹೆಸರು | : ಮುನೇಂದ್ರಪ್ಪ | ಚಾಸಾ-1 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ. | ದಿನಾಂಕಃ 02.02.2026. |
| ವಾಸಸ್ಥಳ | : ಕಳಸ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.14.02.2025 ರಿಂದ ಇಲ್ಲಿಯವರೆಗೂ ಕಳಸ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.13.03.2025 ರಂದು ಸ.7.00 ರ ಸಮಯದಲ್ಲಿ ನಾನು ಕಳಸ ಠಾಣಾ ವ್ಯಾಪ್ತಿಯ ಗಸ್ತು ಕಾರ್ಯಾಚರಣೆಯಲ್ಲಿ ನಿರತನಾಗಿರುವಾಗ ಕೊಪ್ಪದ DySP ರವರು ಕರೆ ಮಾಡಿ ಮಾವಿನಕೆರೆ ಗ್ರಾಮದ ಕಲ್ಲಾಡಗುಡ್ಡದಲ್ಲಿ ರವೀಂದ್ರ ಎಂಬುವ ವ್ಯಕ್ತಿ ದಿನಸಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿಟ್ಟುಕೊಂಡು ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ನೀಡಿರುತ್ತಾರೆ. ನಂತರ ನಾನು ಚಾಸಾ-4 ರಿಂದ 6 ರವರೊಟ್ಟಿಗೆ ಸದರಿ ಸ್ಥಳಕ್ಕೆ ಹೊರಟಿರುತ್ತೇನೆ. ಮಾರ್ಗ ಮಧ್ಯದಲ್ಲಿ ಚಾಸಾ-2 ಮತ್ತು 3 ರವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ, ಅವರಿಗೆ ನೋಟೀಸನ್ನು ಜಾರಿ ಮಾಡಿ ಅವರನ್ನು ನನ್ನೊಟ್ಟಿಗೆ ಕರೆದುಕೊಂಡು ಹೋಗಿರುತ್ತೇನೆ. ಸದರಿ ಸಮಯದಲ್ಲಿ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿರುತ್ತೇನೆ. ಸ.7.40 ರ ಸಮಯದಲ್ಲಿ ಅಂಗಡಿ ಬಳಿ ಹೋಗಲಾಗಿ ಅಲ್ಲಿ ಒಬ್ಬ ವ್ಯಕ್ತಿಯು ನಿಂತಿರುವುದಾಗಿ ಕಂಡುಬಂದಿರುತ್ತದೆ. ಸದರಿ ವ್ಯಕ್ತಿಯ ಹೆಸರು ವಿಳಾಸವನ್ನು ಕೇಳಲಾಗಿ ಸದರಿಯವರ ಹೆಸರು ಆರೋಪಿಯಾದ ರವೀಂದ್ರ ಎಂದು ತಿಳಿಸಿರುತ್ತಾರೆ. ನಂತರ ಆ ವ್ಯಕ್ತಿಗೆ ಸದರಿ ಅಂಗಡಿಯು ಸೇರಿರುತ್ತದೆ ಎಂದು ತಿಳಿದ ನಂತರ ಸದರಿ ಅಂಗಡಿಯನ್ನು ಶೋಧನೆ ಮಾಡಲಾಗಿ ಒಂದು ಪ್ಲಾಸ್ಟಿಕ್ ಬ್ಯಾಗ್ ನಲ್ಲಿ 90 ml ನ 89 ಟೆಟ್ರಾ ಪ್ಯಾಕ್ ಗಳ Original Choice Delux whisky ಇರುವುದು ಕಂಡುಬಂದಿರುತ್ತದೆ. ನಂತರ ಸದರಿ ಮದ್ಯವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ವಶಪಡಿಸಿಕೊಂಡಿರುತ್ತೇನೆ.

ನಂತರ ಮಹಜರ್ ಕ್ರಮವನ್ನು ಜರುಗಿಸಿ ವಸ್ತುಗಳನ್ನು ಜಪ್ತು ಮಾಡಿ ಆರೋಪಿಯೊಂದಿಗೆ ಠಾಣೆಗೆ ಹಾಜರಾಗಿರುತ್ತೇವೆ. ನಂತರ ಠಾಣೆಯಲ್ಲಿಯೇ ವರದಿಯನ್ನು ತಯಾರಿಸಿ ಚಾಸಾ-14 ರವರಿಗೆ ನೀಡಿರುತ್ತೇನೆ.

ದಿ.13.03.2025 ರಂದು ತಯಾರಿಸಿದ ವರದಿ ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-10, ಸಾಕ್ಷಿಯು ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1, 2, 3, 4, 6 ಮತ್ತು 7 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-1(ಸಿ), 2(ಸಿ), 3(ಸಿ), 4(ಸಿ), 6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುಸಿತಿರುತ್ತಾರೆ.

ದಿ.13.03.2025 ರಂದು ಪಂಚರಿಗೆ ನೀಡಿದ ನೋಟೀಸನ್ನು ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ನೋಟೀಸನ್ನು ನಿಪಿ-11 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ ಮತ್ತು ಅದರ ಮೇಲಿರುವ ಸಾಕ್ಷಿಯು ಸಹಿಯನ್ನು ನಿಪಿ-1(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ತಾವು ದಾಳಿ ಮಾಡಿದ ಕಾಲಕ್ಕೆ ಅಕ್ರಮ ಮದ್ಯಮಾರಾಟ ಮಾಡಿದ ವ್ಯಕ್ತಿ ಎಂದು ಗುರುತಿಸುತ್ತಾರೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ

ನನಗೆ ಮಾಹಿತಿ ಬಂದ ಸಮಯದಲ್ಲಿ ನಾವು ಕೈಮರ ವೃತ್ತದ ಬಳಿ ಇದ್ದೆವು. ಚಾಸಾ-2 ಮತ್ತು 3 ರವರು ಕಲ್ಲಾಟಗುಡ್ಡಕ್ಕೆ ಹೋಗುವ ಮಾರ್ಗದಲ್ಲಿ ಸಿಕ್ಕಿರುತ್ತಾರೆ. ಆರೋಪಿಯ ಅಂಗಡಿಯನ್ನು ಚಾಸಾ-2, 3 ಮತ್ತು 4 ರಿಂದ 6 ರವರು ತೋರಿಸಿರುತ್ತಾರೆ. ಸದರಿ ವಿಷಯವನ್ನು ನಮ್ಮ ವರದಿ ಅಥವಾ ಮಹಜರ್ ನಲ್ಲಿ ನಮೂದಿಸಿರುವುದಿಲ್ಲ. ಸ.7.40 ರ ಸಮಯಕ್ಕೆ ನಾವು ಸ್ಥಳಕ್ಕೆ ಹೋಗಿರುತ್ತೇವೆ. ಇಲಾಖಾ ವಾಹನವನ್ನು ಆರೋಪಿಯ ಅಂಗಡಿಯಿಂದ ಸ್ವಲ್ಪ ಹಿಂದೆ ನಿಲ್ಲಿಸಿರುತ್ತೇವೆ. ನಮ್ಮನ್ನು ನೋಡಿ ಮದ್ಯವನ್ನು ಖರೀದಿಸುತ್ತಿದ್ದ ಒಬ್ಬ ವ್ಯಕ್ತಿ ಓಡಲು ಪ್ರಯತ್ನಿಸಿರುತ್ತಾರೆ. ಸದರಿಯವರು ಧರಿಸಿದ್ದ ಬಟ್ಟೆಯ ಬಣ್ಣದ ಬಗ್ಗೆ ನಾನು ಗುರುತಿಸಿರುವುದಿಲ್ಲ. ದಾಳಿ ಮಾಡುವ ಪೂರ್ವದಲ್ಲಿ ನಾವು ಸ್ವ ತಪಾಸಣೆ ಮಾಡಿಕೊಂಡಿರುತ್ತೇವೆ ಆದರೆ ಅದಕ್ಕೆ ಸಂಬಂಧಿಸಿದಂತೆ ವರದಿಯನ್ನು ತಯಾರಿಸಿರುವುದಿಲ್ಲ. ದಾಳಿ ಮಾಡುವ ಪೂರ್ವದಲ್ಲಿ ಠಾಣೆಯಿಂದ ಪ್ರಕರಣದ ಸಂಖ್ಯೆಯನ್ನು ತಿಳಿದುಕೊಂಡಿರುತ್ತೇನೆ. ಸಾಮಾನ್ಯವಾಗಿ ಮಹಜರ್ ಪ್ರತಿಯಲ್ಲಿ ಅಪರಾಧ ಸಂಖ್ಯೆಯನ್ನು ನಮೂದಿಸಬೇಕು ಎಂದರೆ ಸರಿ. ನಿಪಿ-1 ರಲ್ಲಿ ಅಪರಾಧ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಾವು ವಶಪಡಿಸಿಕೊಂಡಂತಹ ಮದ್ಯದ ಪ್ಯಾಕೇಟ್ ಗಳಿಗೆ ನೀಡಿರುವ ಕ್ರಮ ಸಂಖ್ಯೆಯನ್ನು ಹೇಳಲು ಸಾದ್ಯವಿಲ್ಲ ಎಂದರೆ ಸರಿ.

ಆರೋಪಿಯ ಅಂಗಡಿಯಲ್ಲಿ ಯಾವ ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಇದ್ದ ಮದ್ಯವನ್ನು ವಶಪಡಿಸಿಕೊಂಡಿರುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಮಹಜರ್ ಸಮಯದಲ್ಲಿ ವಶಪಡಿಸಿಕೊಂಡ ವಸ್ತುಗಳ ಸಂಪೂರ್ಣ ವಿವರಣೆಯನ್ನು ನೀಡಬೇಕು ಎಂದರೆ ಸರಿ. ಎಂ.ಒ.3 ರ ವರ್ಣನೆಯನ್ನು ಮಹಜರ್ ನಲ್ಲಿ ಮಾಡಿರುವುದಿಲ್ಲ ಎಂದರೆ ಸರಿ. ನನಗೆ DySP ಇಂದ ಯಾವುದೇ ಕರೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಎಂ.ಒ.2 ರಂತಹ ಟೆಟ್ರಾ ಪ್ಯಾಕ್ ಗಳು ಇತರೆ ಅಂಗಡಿಗಳಲ್ಲೂ ಸಿಗುತ್ತವೆ ಎಂದರೆ ಸರಿ. ದಾಳಿಗೆ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ ಮತ್ತು ನಾವು ಸ್ಥಳಕೆ ಹೋದಾಗ ಒಬ್ಬ ವ್ಯಕ್ತಿ ಮದ್ಯದ ಅಂಗಡಿಯ ಮುಂದೆ ನಿಂತಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಅಂಗಡಿಯ ನಾಮ ಫಲಕದ ಬಗ್ಗೆ ಗಮನಿಸಿರುವುದಿಲ್ಲ. ಮಹಜರ್ ಕ್ರಮ ಜರುಗಿಸಿ, ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾಳಿಗೆ ಹೋದ ಸಮಯದಲ್ಲಿ

ಮಾಲೀಕತ್ವವಿಲ್ಲದ ಈ ರೀತಿಯಾದ ವಸ್ತುಗಳು ಸಿಗುತ್ತವೆ ಎಂದರೆ ಸರಿಯಲ್ಲ. ಆ ರೀತಿಯಾದ ವಸ್ತುಗಳನ್ನು ಉಪಯೋಗಿಸಿಕೊಂಡು ಇಲಾಖಾ ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.